ಇ) ಹಲವಾರು ವರ್ಷಗಳಿಂದ ಕೆಲಸ ಮಾಡುತ್ತಿರುವ ಲಿಪಿಕ ನೌಕರರುಗಳನ್ನು ವರ್ಗಾವಣೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):-

ಅ) ವರ್ಗಾವಣೆ ಮಾಡಿದೆ.

ಆ) 15

ಇ) ಕೈಗೊಂಡಿದೆ.

5ವರ್ಷಗಳಿಗೂ ಮೇಲ್ಪಟ್ಟು ಆಯುಕ್ತರ ಕಚೇರಿಯಲ್ಲಿ ಸೇವೆ ಸಲ್ಲಿಸಿರುವವರನ್ನು ವರ್ಗಾವಣೆ ಮಾಡಲಾಗಿದೆ.

ವಿಷಯ:-ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನ ಕಾರ್ಯಕ್ರಮದಲ್ಲಿ ಹುದ್ದೆಗಳನ್ನು ಭರ್ತಿಮಾಡುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1701 (2363)

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ)ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನ ಕಾರ್ಯಕ್ರಮವನ್ನು ಕರ್ನಾಟಕದಲ್ಲಿ ಯಾವಾಗ ಪ್ರಾರಂಭಿಸಲಾಯಿತು. ಹಾಗೂ ಇದರಲ್ಲಿ ಗೆಜೆಟೆಡ್ ಫಿಸಿಯೋಥೆರಾಪಿಸ್ಟ್ ಹುದ್ದೆಗಳು ಎಷ್ಟು?

ಆ)ಗೆಜೆಟೆಡ್ ಫಿಸಿಯೋ ಥೆರಪಿಸ್ಟ್ ಹುದ್ದೆಯಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಫಿಸಿಯೋ ಥೆರಾಪಿಸ್ಟ್‌ಗಳು ಎಷ್ಟು ಜನ ಕೆಲಸ ನಿರ್ವಹಿಸುತ್ತಿದ್ದಾರೆ. ಈ ಹುದ್ದೆಯಲ್ಲಿರುವವರಿಗೆ ಬಡ್ತಿ ದೊರೆಯುತ್ತಿಲ್ಲವೆಂಬುದು ನಿಜವೇ:ಹಾಗಿದ್ದಲ್ಲಿ ಕಾರಣವೇನು?

ಇ)ಬೆಂಗಳೂರು ನಗರದ ಮಾಗಡಿ ರಸ್ತೆಯಲ್ಲಿರುವ ಕುಷ್ಠರೋಗ ಆಸ್ಪತ್ರೆ ರಾಜ್ಯಕ್ಕೆ ಏಕೈಕವಾಗಿದ್ದು, ಇಲ್ಲಿಗೆ ಗೆಜೆಟೆಡ್ ಫಿಸಿಯೋ ಥೆರಪಿಸ್ಟ್ ಹುದ್ದೆಯನ್ನು ನೇಮಿಸಲು ಸರ್ಕಾರ ಯೋಜಿಸಿದೆಯೇ ಹಾಗಿದ್ದಲ್ಲಿ, ಯಾವಾಗ ಆ ಹುದ್ದೆಯನ್ನು ತುಂಬಲಾಗುವುದು.

ಶ್ರೀ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ಕರ್ನಾಟಕದಲ್ಲಿ 1955ರಲ್ಲಿ ರಾಷ್ಟ್ರೀಯ ಕುಷ್ಠರೋಗ ನಿಯಂತ್ರಣ ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದೆ. ಮತ್ತು ಕರ್ನಾಟಕ ರಾಜ್ಯದಲ್ಲಿ ಗೆಜೆಟೆಡ್ ಫಿಸಿಯೋ ಥೆರಪಿಸ್ಟ್ ಎಂಬ ಹುದ್ದೆ ಇರುವುದಿಲ್ಲ.

ಆ) ಕರ್ನಾಟಕದಲ್ಲಿ ಗೆಜೆಟೆಡ್ ಫಿಸಿಯೋ ಥೆರಪಿಸ್ಟ್ ಎಂಬ ಹುದ್ದೆ ಇರುವುದಿಲ್ಲ. ಆದ್ದರಿಂದ ಪರಿಶಿಷ್ಟ ಜಾತಿಗೆ ಸೇರಿದ ಫಿಸಿಯೋ ಥೆರಾಪಿಸ್ಟ್‌ಗಳಿಗೆ ಬಡ್ತಿ ಕೊಡುವ ವಿಷಯ ಬರುವುದಿಲ್ಲ.

ಇ) ಬೆಂಗಳೂರು ನಗರ ಮಾಗಡಿ ರಸ್ತೆಯಲ್ಲಿರುವ ಕುಷ್ಠರೋಗ ಆಸ್ಪತ್ರೆಗೆ ಗೆಜೆಟೆಡ್ ಫಿಸಿಯೋ ಥೆರಪಿಸ್ಟ್ ಹುದ್ದೆಯು ಈಗ ಅವಶ್ಯಕತೆ ಇರುವುದಿಲ್ಲ.

sub:- TELUGU TEXT BOOKS

Un-starred Qn. No-1703(2477)